# ಕರ್ನಾಟಕ ಗೃಹ ಮಂಡಳಿ

## ಜಿಲ್ಲಾ ಯೋಜನಾ ಕಛೇರಿ, ಅರಳೀಮರದಪಾಳ್ಯ, ಶಿರಾಗೇಟ್, ತುಮಕೂರು.

Karnataka Housing Board
Building communities

ಸಂಖ್ಯೆ : ಕಗೃಮಂ/ಸಕಾಅ/ತುಜಿಯೋಕ/ಗೂಳೂರು/ಗ್ರೂಪ್ ಹೌಸಿಂಗ್/135/2019-20 ದಿನಾಂಕ 02.01.2020

### ಬೇಡಿಕೆ ಸಮೀಕ್ಷೆ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯು ತುಮಕೂರು ಜಿಲ್ಲೆ, ತುಮಕೂರು ತಾಲ್ಲೂಕು, ಗೂಳೂರು ಹೋಬಳಿ, ಗೂಳೂರು ಗ್ರಾಮದಲ್ಲಿ ಎಲ್ಲಾ ಮೂಲಭೂತ ಸೌಲಭ್ಯಗಳೊಂದಿಗೆ ಅಭಿವೃದ್ಧಿಪಡಿಸಿರುವ ವಸತಿ ಬಡಾವಣೆಯಲ್ಲಿನ ಸರ್ವೆ ನಂಬರ್ : 141/1 ರಲ್ಲಿನ 01 ಎಕರೆ, 03 ಗುಂಟೆ ಜಮೀನಿನಲ್ಲಿ "Group Housing" (G+2/G+3) ಸಮೂಹ ಬಹುಮಹಡಿ ವಸತಿ ಯೋಜನೆ ಕೈಗೊಳ್ಳಲು ಉದ್ದೇಶಿಸಿ ಬೇಡಿಕೆ ಸಮೀಕ್ಷೆ ಅರ್ಜಿಗಳನ್ನು ಆಹ್ವಾನಿಸುತ್ತಿದ್ದು, ವಿವರಗಳು ಈ ಕೆಳಕಂಡಂತೆ ಇರುತ್ತವೆ. ಆಸಕ್ತಿಯುಳ್ಳ ಸಾರ್ವಜನಿಕರು ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ, ಕರ್ನಾಟಕ ಗೃಹ ಮಂಡಳಿ, ಅರಳೀಮರದಪಾಳ್ಯ, ಶಿರಾಗೇಟ್, ತುಮಕೂರು ಇಲ್ಲಿ ಅರ್ಜಿಗಳನ್ನು ಪಡೆದು ಭರ್ತಿ ಮಾಡಿ, ಆರಂಭಿಕ ಠೇವಣಿಯೊಂದಿಗೆ ಅರ್ಜಿಗಳನ್ನು ಸಲ್ಲಿಸಿ ನೋಂದಾಯಿಸಿಕೊಳ್ಳಬಹುದಾಗಿರುತ್ತದೆ.

| ಮನೆಯ ವರ್ಗ | ಕಟ್ಟಡದ ವಿಸ್ತೀರ್ಣ (ಚ.ಮೀ.ಗಳಲ್ಲಿ) | ಪ್ರತಿ ಮನೆಯ ಅಂದಾಜು ಮೊತ್ತ (ರೂ.ಗಳಲ್ಲಿ) | ಬೇಡಿಕೆ ಸಮೀಕ್ಷೆ ಅರ್ಜಿಯೊಂದಿಗೆ ಪಾವತಿಸಬೇಕಾಗಿರುವ ಆರಂಭಿಕ ಠೇವಣಿ. (ರೂ.ಗಳಲ್ಲಿ) | ನೋಂದಣಿ ಶುಲ್ಕ (ರೂ.ಗಳಲ್ಲಿ) | ಅರ್ಜಿಗಳನ್ನು ವಿತರಿಸುವ ಪ್ರಾರಂಭ ದಿನಾಂಕ | ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕ |
|---|---|---|---|---|---|---|
| LIG (2BHK) | 45 ರಿಂದ 50 ಚ.ಮೀ. | 12,50,000-00 | 10,000-00 | 1,000-00 | 16.01.2020 | 15.02.2020 |

**ಷರತ್ತು ಮತ್ತು ನಿಬಂಧನೆಗಳು.**

1) ಈ ಅಧಿಕೃತ ಪ್ರಕಟಣೆಯನ್ನು ನಿಖರ ಬೇಡಿಕೆ ಸಮೀಕ್ಷೆಗಾಗಿ ಸಾರ್ವಜನಿಕರ ಹಿತದೃಷ್ಠಿಯಿಂದ ಪ್ರಕಟಿಸಲಾಗಿದೆ.
2) ಅರ್ಜಿ ಸಲ್ಲಿಸುವವರು ಅರ್ಜಿ ಶುಲ್ಕ ರೂ.100/- ಗಳನ್ನು ಪಾವತಿ ಮಾಡಿ, ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ತುಮಕೂರು ಜಿಲ್ಲಾ ಯೋಜನಾ ಕಛೇರಿಯಿಂದ ಪಡೆಯತಕ್ಕದ್ದು.
3) ನೋಂದಣಿ ಶುಲ್ಕ ಹಾಗೂ ಆರಂಭಿಕ ಠೇವಣಿಯ ಒಟ್ಟು ಮೊತ್ತ ರೂ.11,000/- ಗಳ ಹಣವನ್ನು **"Housing Commissioner, KHB, Bangalore"** ಇವರ ಹೆಸರಿನಲ್ಲಿ ಡಿ.ಡಿ. ಪಡೆದು, ಭರ್ತಿ ಮಾಡಿದ ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.
4) ಮನೆಗಳನ್ನು ಪ್ರ-ವರ್ಗಗಳಲ್ಲಿ ಮೀಸಲಾತಿಯನ್ವಯ ಕಾಯ್ದಿರಿಸಿ ಹಂಚಿಕೆ ಮಾಡಲಾಗುವುದು.
5) ಆಯಾ ಪ್ರವರ್ಗವಾರು ಅಡಿಯಲ್ಲಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು (SC, ST, BT, Def, Ex-Ser, Cen Govt, St. Govt, Sin Ctzn, Phy.H etc., ) ಸಂಬಂಧಿಸಿದ ದೃಢೀಕೃತ ದಾಖಲಾತಿಯನ್ನು ಅರ್ಜಿಯೊಂದಿಗೆ ಲಗತ್ತಿಸಿ ಸಲ್ಲಿಸುವುದು.
6) ಮನೆಗಳನ್ನು ಒಂದೇ ಇಡುಗಂಟಿನ (Outright Sale) ಆಧಾರದ ಮೇಲೆ ಹಂಚಿಕೆ ಮಾಡಲಾಗುವುದು.
7) ಅರ್ಜಿ ಸಲ್ಲಿಸುವುದಕ್ಕೆ ಮೊದಲು 10 ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಕಾಲ ಅರ್ಜಿದಾರರು ಕರ್ನಾಟಕ ರಾಜ್ಯದ ಸಾಮಾನ್ಯ ನಿವಾಸಿಯಾಗಿರಬೇಕು.
8) ಅರ್ಜಿದಾರರು ಕರ್ನಾಟಕ ಗೃಹ ಮಂಡಳಿ ಅಥವಾ ಯಾವುದೇ ಸ್ಥಳೀಯ ಸಂಸ್ಥೆ / ಪ್ರಾಧಿಕಾರದಿಂದ ಈ ಹಿಂದೆ ಮನೆ/ನಿವೇಶನ ಪಡೆದಿರುವುದಿಲ್ಲವೆಂದು ನೋಟರಿ ಮೂಲಕ ಪ್ರಮಾಣೀಕರಿಸಿ ಪ್ರಮಾಣಪತ್ರ (Notary Affidavit) ಸಲ್ಲಿಸಬೇಕು)
9) ಮನೆಗಳ ಹಂಚಿಕೆಗಾಗಿ ಅರ್ಜಿ ಸಲ್ಲಿಸಿ ನೋಂದಣಿ ಪಡೆದ ಅರ್ಜಿದಾರರಿಗೆ ನೋಂದಣಿ ಶುಲ್ಕವನ್ನು ಮರುಪಾವತಿ ಮಾಡಲಾಗುವುದಿಲ್ಲ.
10) ಕರ್ನಾಟಕ ಗೃಹ ಮಂಡಳಿ 1983 ರ ಹಂಚಿಕೆ ನಿಯಮಾವಳಿ ಮತ್ತು ನಿಬಂಧನೆಗಳಿಗೆ ಒಳಪಟ್ಟಿರುತ್ತದೆ.
11) ಸಾರ್ವಜನಿಕ/ಕಂಪ್ಯೂಟರ್ ಲಾಟರಿ ಪ್ರಕ್ರಿಯೆ ನಡೆಸುವ ಮೂಲಕ ಮನೆಗಳ ಹಂಚಿಕೆಯನ್ನು ಮಾಡಲಾಗುವುದು ಹಾಗೂ ಸದರಿ ಹಂಚಿಕೆಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕರ್ನಾಟಕ ಗೃಹ ಮಂಡಳಿಯು ಕಾಯ್ದಿರಿಸಿಕೊಂಡಿರುತ್ತದೆ.

ಹೆಚ್ಚಿನ ಮಾಹಿತಿಗಾಗಿ ಶ್ರೀ ಹಾಲೇಶಪ್ಪ ಎಸ್.ಎಲ್., ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಜಿಲ್ಲಾ ಯೋಜನಾ ಕಛೇರಿ, ತುಮಕೂರು. ಮೊಬೈಲ್ ನಂಬರ್ : **9845600099, 9449939332, 8762653792, 9902776399, 0816-2212398** ಸಂಪರ್ಕಿಸಬಹುದು.

02/01/2020

ಸಹಾಯಕ ಕಾರ್ಯಪಾಲಕ ಅಭಿಯಂತರರು,
ಕರ್ನಾಟಕ ಗೃಹ ಮಂಡಳಿ,
ಜಿಲ್ಲಾ ಯೋಜನಾ ಕಛೇರಿ, ತುಮಕೂರು.

Scanned with CamScanner